**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಸಿಜೆಎಂ ನ್ಯಾಯಾಲಯ, ಉಡುಪಿ.**

**ಸಿ.ಸಿ.ಃ 6/2018**
**ಪಿ.ಡಬ್ಲ್ಯೂ.4, ಸಿ.ಡಬ್ಲ್ಯೂಃ 1**

ಸಾಕ್ಷಿದಾರರ ಹೆಸರು ಃ ಶಂಕರ್ ನಾಯಕ್
**ತಂದೆಯ ಹೆಸರು** ಃ ಮಹಾದೇವ ನಾಯಕ್
**ವಯಸ್ಸು** ಃ **54** ವರ್ಷ
**ಉದ್ಯೋಗ** ಃ ವ್ಯಾಪಾರ
**ವಾಸಸ್ಥಳ** ಃ ಮಣಿಪಾಲ

**ದಿಃ 22.07.2019** ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಹಿರಿಯ ಸಹಾಯಕ ಅಭಿಯೋಜಕರಿಂದಃ

**1.** ಮಣಿಪಾಲದ **80** ಬಡಗುಬೆಟ್ಟು ಗ್ರಾಮದಲ್ಲಿ ನಾನು ನನ್ನ ಹೆಂಡತಿ ಮತ್ತು ಮಕ್ಕಳ ಜೊತೆ ವಾಸ್ತವ್ಯ ಮಾಡುತ್ತಿದ್ದೇನೆ. ಈಗ ಕಳೆದ **6-7** ವರ್ಷಗಳ ಹಿಂದೆ ಎಂದಿನಂತೆ ಬೆಳಿಗ್ಗೆ **8.30** ರ ಒಳಗೆ ಮಕ್ಕಳನ್ನು ಶಾಲೆಗೆ ಕಳುಹಿಸಿ ನಾನು ಮತ್ತು ನನ್ನ ಹೆಂಡತಿ ಮಣಿಪಾಲದ ಪೋಲೀಸ್ ವಸತಿ ಗೃಹದ ಹತ್ತಿರ ಇರುವ ಒಂದು ಕ್ಯಾಂಟೀನ್ ಗೆ ಕೆಲಸ ಮಾಡಲು ಮನೆಗೆ ಬೀಗ ಹಾಕಿ ಹೋಗಿದ್ದೆವು. ಎಂದಿನಂತೆ ನಾನು ಮಧ್ಯಾಹ್ನ ಮನೆಗೆ ಊಟಕ್ಕೆ ಬಂದಾಗ ನಮ್ಮ ಮನೆಯ ಮುಂದಿನ ಬಾಗಿಲಿನ ಬೀಗ ಒಡೆದು ಬಾಗಿಲು ತೆಗೆದಿರುವುದು ಕಂಡು ಬಂದಿತ್ತು. ಒಳಗೆ ಹೋಗಿ ನೋಡಿದಾಗ ಮನೆಯ ಒಳಗೆ ಇದ್ದ ಗೋದ್ರೇಜ್ ಕಪಾಟನ್ನು ತೆಗೆದಿದ್ದು ಅದರಲ್ಲಿದ್ದ ಬಟ್ಟೆಗಳೆಲ್ಲಾ ಚೆಲ್ಲಾಪಿಲ್ಲಿಯಾಗಿದ್ದವು. ನಂತರ ಮನೆಯಲ್ಲಿ ಪರಿಶೀಲಿಸಿ ನೋಡಿದಾಗ ಮನೆಯಲ್ಲಿದ್ದ ಐರನ್ ಬಾಕ್ಸ್, ಮೊಬೈಲ್-**1**, ಕ್ಯಾಮರಾ, ಮಕ್ಕಳ ಪೆನ್ನು ಮತ್ತು ಪೆನ್ಸಿಲ್ ಇಡುವ ಬ್ಯಾಗ್, ದೇವರ ಕಾಣಿಕೆಗಾಗಿ ಇಡಲಾದ ಕಾಣಿಕೆ ಇದ್ದ **2** ಡಬ್ಬಗಳು ಮತ್ತು ನಾನು ಮನೆಯಲ್ಲಿ ಶೇಖರಿಸಿಟ್ಟಿದ್ದ ಸುಮಾರು **60** ಸಾವಿರ ರೂ. ನಗದು, ಸಣ್ಣ ಪುಟ್ಟ ಚಿನ್ನದ ಆಭರಣಗಳು ಕಳ್ಳತನ ಆಗಿದ್ದು ಕಂಡುಬಂದಿತ್ತು. ನಂತರ ಈ ಬಗ್ಗೆ ನಾನು ಮಣಿಪಾಲ ಪೋಲೀಸ್ ಠಾಣೆಯಲ್ಲಿ ದೂರನ್ನು ದಾಖಲು ಮಾಡಿರುತ್ತೇನೆ. ದೂರಿನ ನಿಜಪ್ರತಿಯನ್ನು ನಿ.ಪಿ-**4** ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-**4**(ಎ) ಎಂದು ಗುರುತಿಸಿದೆ.

**2.** ನಾನು ದೂರು ಕೊಟ್ಟ ನಂತರ ಪೋಲೀಸರು ಅದೇ ದಿನ ಮನೆಗೆ ಬಂದು ಸ್ಥಳ ಪರಿಶೀಲನೆ ಮಾಡಿ ಈ ಬಗ್ಗೆ ಪಂಚನಾಮೆ ಬರೆದು ನನ್ನ ಸಹಿಯನ್ನು ಪಡೆದಿರುತ್ತಾರೆ. ಸದ್ರಿ ಪಂಚನಾಮೆಯ ನಿಜಪ್ರತಿಯನ್ನು ನಿ.ಪಿ-**5** ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-**5**(ಎ) ಎಂದು ಗುರುತಿಸಿದೆ. ಆ ಸಮಯದಲ್ಲಿ ನಮ್ಮ ಮನೆಯ ಹತ್ತಿರದ ನಿವಾಸಿಗಳಾದ ಚಾ.ಸಾ-**4** ರವರು ಮತ್ತು ಇತರರು ಇದ್ದರು. ನಾನು ಮೊದಲಿಗೆ ನಮ್ಮ ಮನೆಯ ಚಿನ್ನಾಭರಣಗಳು ಸಹಾ ಕಳ್ಳತನ ಆಗಿದೆ

ಎಂದು ದೂರು ನೀಡಿದ್ದೆನು. ಅದೇ ದಿನ ಸಂಜೆ ಹುಡುಕುತ್ತಿದ್ದಾಗ ಒಂದು ಅಂಗಿಯ ಕಿಸೆಯಲ್ಲಿ ಕಳ್ಳತನ ಆಗಿದೆ ಎಂದು ಹೇಳಲಾದ ಚಿನ್ನಾಭರಣಗಳು ಅದರಲ್ಲಿ ಇದ್ದವು.

**3.** ಕಳ್ಳತನ ಆದ **1** ತಿಂಗಳ ನಂತರ ಪೋಲೀಸರು ನನ್ನನ್ನು ಠಾಣೆಗೆ ಕರೆಸಿದ್ದು ಆ ಸಮಯದಲ್ಲಿ ನಮ್ಮ ಮನೆಯಿಂದ ಕಳ್ಳತನ ಮಾಡಿಕೊಂಡು ಹೋದ ಇಸ್ತ್ರಿಪೆಟ್ಟಿಗೆ, ಕ್ಯಾಮರಾ, ಮೊಬೈಲ್ ಮತ್ತು ಬ್ಯಾಗ್ ಅನ್ನು ಪೋಲೀಸರು ತೋರಿಸಿದ್ದು ಅವುಗಳನ್ನು ನಾನು ಗುರುತಿಸಿರುತ್ತೇನೆ. ಈಗ ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದಲ್ಲಿದ್ದ ಇಸ್ತ್ರಿಪೆಟ್ಟಿಗೆ, ಮೊಬೈಲ್, ಕ್ಯಾಮರಾ ಮತ್ತು ಬ್ಯಾಗ್ ಅನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮುದ್ದೆಮಾಲು **1** ರಿಂದ **4** ಎಂದು ಮೂಲ ಸಿಸಿ **20/17** ರಲ್ಲಿ ಗುರುತಿಸಿದೆ. ಸದ್ರಿ ಮುದ್ದೆಮಾಲು **1** ರಿಂದ **4** ನ್ನು ಈಗಾಗಲೇ ಸಿಸಿ ನಂಬ್ರ **20/17** ರಲ್ಲಿ ಗುರುತಿಸಿರುವ ಕಾರಣ ಸದ್ರಿ ಸಿಸಿಯಲ್ಲಿ ಮುದ್ದೆಮಾಲುಗಳನ್ನು ಇಡುವಂತೆ ಆದೇಶಿಸಿದೆ. ಸದ್ರಿ ವಸ್ತುಗಳನ್ನು ಯಾರು ಕಳ್ಳತನ ಮಾಡಿದ್ದರು ಎಂಬುದರ ಬಗ್ಗೆ ನನಗೆ ಗೊತ್ತಿಲ್ಲ. ಆ ಬಗ್ಗೆ ಪೋಲೀಸರು ಸಹಾ ನನಗೆ ತಿಳಿಸಿರುವುದಿಲ್ಲ. ಮೇಲೆ ಹೇಳಿದ ವಸ್ತುಗಳನ್ನು ಆರೋಪಿಗಳು ಕಳ್ಳತನ ಮಾಡಿದ್ದರು ಎಂದು ಪೋಲೀಸರು ನನಗೆ ತಿಳಿಸಿದ್ದಾರೆ.

ಸಾಕ್ಷ್ಯವನ್ನು **299** ಸಿಆರ್ ಪಿಸಿ ಯಡಿಯಲ್ಲಿ ದಾಖಲು ಮಾಡಲಾಗಿದೆ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಿಸಲಾ** ಯಿತು)

**ಓ ಹೇ ಕೇ ಸ ಇದೆ ಎಂದು ಒಪ್ಪಿದರು**

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಎ.ಸಿ.ಜೆ.ಎಮ್, ಉಡುಪಿ.**